ಬೆಂಗಳೂರು ನಗರದಲ್ಲಿ ಸೈಬರ್ ಅಪರಾಧಗಳ ಬಗ್ಗೆ

251 (534) ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ 2006 ಜನವರಿಯಿಂದ ಇಲ್ಲಿಯವರೆಗೆ ವರದಿಯಾಗಿರುವ ಸೈಬರ್ ಅಪರಾಧಗಳ ದೂರುಗಳ ಸಂಖ್ಯೆ ಎಷ್ಟು;

ಆ) ಯಾವ ಯಾವ ವಿಧವಾದ ಸೈಬರ್ ಅಪರಾಧಗಳು ಈ ಅವಧಿಯಲ್ಲಿ ವರದಿಯಾಗಿವೆ;

ಇ) ಇವುಗಳ ಪೈಕಿ ಎಷ್ಟು ಅಪರಾಧಗಳು ಪತ್ತೆಯಾಗಿವೆ;

ಈ) ಬೆಂಗಳೂರು ನಗರದಲ್ಲಿರುವ ಸೈಬರ್ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು;

ಉ) ಈ ಅಪರಾಧಗಳ ಬಗ್ಗೆ ಜನತೆಗೆ ಅರಿವು ಮೂಡಿಸಲು ಹಾಗೂ ಅಪರಾಧಗಳನ್ನು ದಾಖಲಿಸಲು ಹೆಚ್ಚು ಸೈಬರ್ ಪೊಲೀಸ್ ಠಾಣೆ ತೆರೆಯಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) 2006 ಜನವರಿಯಿಂದ ಇಲ್ಲಿಯವರೆಗೆ ದಾಖಲಾದ ಸೈಬರ್ ಅಪರಾಧಗಳ ಸಂಖ್ಯೆ 40.

ಆ).

1. Sec. 65 of IT Act 2000 = 05 Cases (Trapering with Computer Source Documents)
2. Sec. 66 of IT Act 2000 = 29 Cases (Hacking with Computer System)
3. Sec. 67 of IT Act 2000 = 06 Cases (Publishing pf information which is obscene in electronic from)

ಇ) ಒಟ್ಟು ಪತ್ತೆಯಾಗಿರುವ ಅಪರಾಧಗಳು 31.

ಈ) ಒಂದು (ಸಿಓಡಿ ಘಟಕದಲ್ಲಿರುತ್ತದೆ)

ಉ) ಇಲ್ಲ.

ಶ್ರೀ ವಿ.ಸೋಮಣ್ಣ : ಸನ್ಮಾನ್ಯ ಪ್ರಕಾಶ್‌ರವರು ಉತ್ತರವನ್ನು ಕೊಟ್ಟಿದ್ದಾರೆ. ಸೈಬರ್ ದಂಧೆ ಬರೀ ಬೆಂಗಳೂರಿನಲ್ಲಿ ಮಾತ್ರವಲ್ಲ, ಇಡೀ ರಾಷ್ಟ್ರದಲ್ಲೇ ವ್ಯಾಪಿಸಿದೆ. ಬೆಂಗಳೂರು ನಗರದಲ್ಲಿ 2006ರಿಂದ ಇಲ್ಲಿಯವರೆಗೆ ಎಷ್ಟು ಸೈಬರ್ ಅಪರಾಧಗಳಾಗಿವೆ ಎಂದು ಕೇಳಿದ್ದೇನೆ. 40 ಅಪರಾಧ ಗಳಾಗಿವೆ ಎಂದು ಉತ್ತರ ಕೊಟ್ಟಿದ್ದಾರೆ. ಸಾಕಷ್ಟು ಅಪರಾಧಗಳಾಗಿವೆ, ಆದರೆ ಅವುಗಳನ್ನು ಹೇಳುವುದಕ್ಕಾಗುತ್ತಿಲ್ಲ. Section 65 of IT Act ಪ್ರಕಾರ ಸೈಬರ್ ದಂಧೆಯನ್ನು ಮಾಡುತ್ತಿದ್ದು, ಇದೊಂದು ನಿಗೂಢವಾಗಿರತಕ್ಕಂಥ, ಗೌಪ್ಯವಾಗಿ ರತಕ್ಕಂಥ ವ್ಯವಸ್ಥೆಯಾಗಿದ್ದು, ಜನ ಸಾಮಾನ್ಯರಿಗೆ ಯಾರದೋ ಆಸ್ತಿಪಾಸ್ತಿ ಯನ್ನು, ಹಣವನ್ನು ಮತ್ತೊಂದನ್ನು, ಮಗದೊಂದನ್ನು ಇನ್ನೊಬ್ಬರು ಅದೇ ರೀತಿ ಮಾಡಿ ಕಂಪ್ಯೂಟರ್ ಮೂಲಕ ಇನ್ನೊಬ್ಬರು ತೆಗೆದುಕೊಳ್ಳುತ್ತಿದ್ದಾರೆ. ಇದೊಂದು ದೊಡ್ಡ ದಂಧೆಯಾಗಿದ್ದು, ಇದು ಇಡೀ ವಿಶ್ವದಲ್ಲಿಯೇ ನಡೆಯುತ್ತಿದೆ, ಎಷ್ಟು ಅಪರಾಧಗಳು ಪತ್ತೆಯಾಗಿವೆ ಎಂದು ಕೇಳಿದ್ದರೆ, 31 ಎಂದು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಎಷ್ಟು ಸೈಬರ್ ಪೊಲೀಸ್ ಠಾಣೆಗಳಿವೆ ಎಂದರೆ, ಒಂದೇ ಒಂದು ಠಾಣೆ ಸಿಓಡಿ ಘಟಕದಲ್ಲಿ ಮಾತ್ರ ಇದೆ ಎಂದು ಹೇಳಿದ್ದಾರೆ. ಬಹುತೇಕ ಜನರಿಗೆ ಈ ರೀತಿಯ ತೊಂದರೆ ಗಳಾಗಿದ್ದರೂ, ಪೊಲೀಸ್ ಠಾಣೆಗಳಿಗೆ ಹೋಗಿರತಕ್ಕಂಥ ನಿದರ್ಶನಗಳು ಬಹಳ ಕಡಿಮೆ ಇವೆ. ನಾನು ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ಗೊಂದಲದಲ್ಲಿರುವ ಜನಸಾಮಾನ್ಯರಿಗೆ ಇದರ ಬಗ್ಗೆ ಏನಾದರೂ ಮಾಡಿ ಅರಿವನ್ನು ಮೂಡಿಸತಕ್ಕಂಥಾದ್ದು ಆಗಬೇಕು. ಈಗಿರತಕ್ಕಂಥ ಕಾನೂನಿನಲ್ಲಿ, ಇಂಥ ದಂಧೆಗಳನ್ನು ಮಾಡಿದಂಥವರನ್ನು ಪೊಲೀಸರು ಹಿಡಿದುಕೊಂಡು ಹೋದ ಎರಡು ನಿಮಿಷಗಳಲ್ಲೇ ಅವರು ವಾಪಸ್ಸು ಬರುತ್ತಾರೆ. ಅದಕ್ಕಾಗಿ, ಒಂದು ಹೊಸ ಕಾಯಿದೆಯನ್ನು ತಂದು ಈ ರೀತಿಯ ಅಪರಾಧಗಳನ್ನು ಮಾಡುವಂಥಾವರಿಗೆ ಸರಿಯಾದ ಶಿಕ್ಷೆಯನ್ನು ವಿಧಿಸತಕ್ಕಂಥಾದ್ದಕ್ಕೆ ಸರ್ಕಾರ ಚಿಂತನೆ ಮಾಡಿದೆಯಾ? ಇವತ್ತು ಕಂಪ್ಯೂಟರ್ ಕ್ಷೇತ್ರದಲ್ಲಿ ಎಷ್ಟು ತಾಂತ್ರಿಕವಾಗಿ ಬೆಳವಣಿಗೆಗಳಾಗುತ್ತಿವೆಯೋ, ಅಷ್ಟೂ ಅನಾನುಕೂಲಗಳಾಗುತ್ತಿವೆ. ಈ ಬಗ್ಗೆ ಜನಸಾಮಾನ್ಯರಿಗೆ ಅರಿವನ್ನು ಮೂಡಿಸತಕ್ಕಂಥ ಒಂದು ಕೆಲಸವನ್ನು ಸರ್ಕಾರ ಮಾಡುವುದಕ್ಕೆ ಚಿಂತನೆ ಮಾಡಿದೆಯಾ? ವಿನಿವಿಂಕ್ ಪ್ರಕರಣ ತಮಗೆ ಗೊತ್ತಿದೆ, ಅದೇ ರೀತಿಯಲ್ಲಿ ಚೀಟಿ ವ್ಯವಹಾರಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ಜನರು ಮೋಸ ಹೋಗುತ್ತಿದ್ದಾರೆ. ಇಂಥವುಗಳೆಲ್ಲವನ್ನೂ ಒಳಪಡಿಸಿ, ಒಂದು ಕಾನೂನು

ತಂದು, ಆ ಕಾನೂನಿನಡಿಯಲ್ಲಿ ಸರ್ಕಾರ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳತಕ್ಕಂಥಾದ್ದಕ್ಕೆ ಚಿಂತನೆ ಮಾಡಿದೆಯಾ? ಎಂದು ನಾನು ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಸೋಮಣ್ಣನವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸೈಬರ್ ಅಪರಾಧ ಎನ್ನತಕ್ಕಂಥಾದ್ದು, ಹೊಸ ತಂತ್ರಜ್ಞಾನದ ಆವಿಷ್ಕಾರದಿಂದ ಪ್ರಾರಂಭವಾಗಿರತಕ್ಕಂಥಾದ್ದು. ಆ ಕಾರಣಕ್ಕಾಗಿಯೇ ಇದನ್ನು ಪತ್ತೆ ಮಾಡತಕ್ಕಂಥಾದ್ದಕ್ಕೆ ನಮ್ಮ ಪೊಲೀಸರಿಗೂ ಹೆಚ್ಚಿನ ತರಬೇತಿಯ ಅವಶ್ಯಕತೆ ಇದೆ. ಈ ಅಪರಾಧದ ಸ್ವರೂಪ ಬರಲಾದಂಥ ರೀತಿಯಲ್ಲಿ ಕಾನೂನಿನಲ್ಲಿಯೂ ಕೂಡ ಬದಲಾವಣೆಗಳನ್ನು ತರಬೇಕಾದಂಥ ಅವಶ್ಯಕತೆ ಇದೆ. ಪ್ರಥಮ ಬಾರಿಗೆ ಬೆಂಗಳೂರು ನಗರದಲ್ಲಿ ಒಂದು ಪೊಲೀಸ್ ಠಾಣೆಯನ್ನು ಪ್ರಾರಂಭ ಮಾಡಿರತಕ್ಕಂಥ ಹೆಗ್ಗಳಿಕೆ ನಮ್ಮ ರಾಜ್ಯ ಸರ್ಕಾರಕ್ಕಿದೆ. ಅಂಥ ಒಂದು ಮಾಹಿತಿ ತಂತ್ರಜ್ಞಾನದಲ್ಲಿ ನಾವು ಮುಂಚೂಣಿಯಲ್ಲಿ ಕೂಡ ಇದ್ದೇವೆ. ಭೌತಿಕ ಆಸ್ತಿಗಳ ಬಗ್ಗೆ ಇರುವಂತ ಕಾಯಿದೆಯ ಕೆಳಗೆ, ಕಾಪಿರೈಟ್ ಕಾಯಿದೆಯ ಕೆಳಗೆ, ಟ್ರೇಡ್ ಮಾರ್ಕ್ ಕಾಯಿದೆಯ ಕೆಳಗೆ ಮತ್ತು ವಿವಿಧ ಕಾನೂನುಗಳ ಕೆಳಗೆ ಅಪರಾಧ ಮಾಡಿದಂಥವರೆಲ್ಲರನ್ನೂ ಕೂಡ ದಂಡಿಸಲು ಸಾಧ್ಯವಾಗಿರತಕ್ಕಂಥ ರೀತಿಯಲ್ಲಿ ಕಾನೂನುಗಳು ನಮಗೆ ಉಗುರು ಮತ್ತು ಹಲ್ಲನ್ನು ಕೊಡುತ್ತವೆ. ಆದರೆ ತಾವು ಹೇಳಿದಂತೆ, ಅನೇಕ ಸೂಕ್ಷ್ಮವಾಗಿರತಕ್ಕಂಥ ವಿಷಯಗಳಿಗೆ ಸಂಬಂಧಪಟ್ಟಂತೆ ಒಂದು ಸಮಗ್ರ ಕಾಯಿದೆಯನ್ನು ಮಾಡಬೇಕೆಂದು ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಅದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ, ಆಲೋಚನೆಯನ್ನು ಮಾಡಿ, ಯಾವ ರೀತಿಯಾಗಿರ– ತಕ್ಕಂಥ ಕಾನೂನನ್ನು ನಾವು ರೂಪಿಸಬೇಕು ಎನ್ನುವುದರ ಬಗ್ಗೆಯೂ ನಾವು ಯೋಚನೆಯನ್ನು ಮಾಡುತ್ತೇವೆ.

ಈಗಾಗಲೇ ನಾವು ಉತ್ತರದಲ್ಲಿ ಹೇಳಿರುವಂತೆ 31 ಪ್ರಕರಣಗಳನ್ನು ಪತ್ತೇ ಮಾಡಿದ್ದೇವೆ. ಒಂದು ಘಟಕದಲ್ಲಿ ಮಾತ್ರ ನಮ್ಮ ಪೊಲೀಸ್ ಠಾಣೆ ಇರುವುದರಿಂದ ಹೆಚ್ಚಿನ ಕೆಲಸ ಮಾಡುವುದಕ್ಕೆ ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ಮತ್ತು ಪೇದೆಗಳಿಗೆ ತರಬೇತಿಯನ್ನು ಕೊಟ್ಟು ತಯಾರು ಮಾಡುತ್ತಿದ್ದೇವೆ. Section 67 of Income Tax Act ಕೆಳಗೆ 6 ಕೇಸ್‌ಗಳನ್ನು ಈಗಾಗಲೇ ದಾಖಲಿಸಿಕೊಂಡು ಅವರ ಮೇಲೆ ಕ್ರಮ ಕೈಗೊಳ್ಳುತ್ತಿದ್ದೇವೆ. ಅಂತರ್ಜಾಲದ ಅಪರಾಧಿಗಳಲ್ಲಿ ಮಾಹಿತಿಗಳನ್ನು ಬದಲಾವಣೆ ಮಾಡತಕ್ಕಂಥದು ಮತ್ತು

Online Banking Accountಗಳನ್ನು hack ಮಾಡತಕ್ಕಂಥದು ಬಹಳ ಸೂಕ್ಷ್ಮವಾದಂಥ ಕೆಲಸಗಳು. Hacking ಮಾಡತಕ್ಕಂಥದನ್ನು ಬಹಳ ಪರಿಣತರಾದವಂತವರೇ ಮಾಡುತ್ತಾರೆ. ಇತ್ತೀಚೆಗೆ ಅನೇಕ ಇಂಗ್ಲೀಷ್ ಕಾದಂಬರಿಗಳು ಇದರ ಮೇಲೆ ಅವಲಂಬಿತವಾಗಿರತಕ್ಕಂಥದು ಕೂಡ ಇವೆ. ತಾವು ಹೇಳಿದಂಥ ರೀತಿಯಲ್ಲಿ ಖಂಡಿತವಾಗಿ ಸರ್ಕಾರ ಸರ್ವ ಪ್ರಯತ್ನವನ್ನು ಮಾಡುತ್ತದೆ.

ದಿನಗೂಲಿ ನೌಕರರ ಕಾಯಂ ಮಾಡುವ ಬಗ್ಗೆ

252 (1652) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಚಿವ ಸಂಪುಟ ಸಭೆಯಲ್ಲಿ ತೀರ್ಮನಿಸಿದಂತೆ ದಿನಗೂಲಿ ನೌಕರರ ಕಾಯಂಮಾತಿ ಬಗ್ಗೆ ಉಪ ಸಮಿತಿ ರಚನೆಯಾಗಿದೆಯೇ; (ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರ ವಿವರಗಳನ್ನು ನೀಡುವುದು);

ಆ) ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ 2.5.2006 ರಿಂದ ಹೊಸ ಎಸ್.ಎಸ್.ಆರ್. ದರದಂತೆ ವೇತನ ಪಾವತಿಸಲಾಗುತ್ತಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಕಾರಣವೇನು;

ಈ) ದಿನಗೂಲಿ ನೌಕರು ಎಂದರೆ ಯಾರು; ಎಷ್ಟು ವರ್ಷಗಳಿಂದ ಇವರುಗಳು ಸರ್ಕಾರದ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ; ಈ ಬಗ್ಗೆ ಕಛೇರಿಗಳಲ್ಲಿ ದಾಖಲಾತಿಗಳು ಇಡಲಾಗಿದೆಯೇ;

ಉ) ದಿನಗೂಲಿ ನೌಕರರಿಗೆ ಪ್ರತಿ ತಿಂಗಳು ವೇತನ ಪಾವತಿಸಲಾಗುತ್ತಿದೆಯೇ; ಅಥವಾ ಯಾವ ರೀತಿ ವೇತನ ಪಾವತಿ ಮಾಡಲಾಗುತ್ತಿದೆ? (ವಿವರ ನೀಡುವುದು);

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿ) :

ಅ) ದಿನಾಂಕ: 1-7-1984ರ ನಂತರ ಸೇವೆಯಲ್ಲಿ ತೊಡಗಿಸಲಾದ ದಿನಗೂಲಿ ನೌಕರರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಸಂವಿಧಾನದ ಪೀಠವು ದಿನಾಂಕ: 10-4-2006 ರಂದು ನೀಡಿರುವ ತೀರ್ಪಿನ ಪರಿಣಾಮಗಳನ್ನು ಪರಿಶೀಲಿಸಿ, ತನ್ನ ಶಿಫಾರಸ್ಸುಗಳನ್ನು ಸಚಿವ ಸಂಪುಟದ ಅನುಮೋದನೆಗೆ ಒಪ್ಪಿಸುವ ಸಲುವಾಗಿ ಸಚಿವ ಸಂಪುಟ ಉಪ